
ಶುದ್ಧೀಕರಣ - ಹೀಗೆ ಪಟ್ಟಿ ಮಾಡುತ್ತಾ ಹೋದರೆ ನಾಗರಿಕತೆಯ ವಿಶ್ವಕೋಶದಂತಿದೆ ಈ ಕವನಗಳ ವಸ್ತು. ಅಲ್ಲದೆ, ಇವುಗಳನ್ನು ಸೃಷ್ಟಿಸಿರುವ ಕವಿಯ ಪ್ರಜ್ಞೆಯೂ ಅಷ್ಟೇ ವಿಸ್ತಾರವಾದುದು. ಕನ್ನಡ ಕಾವ್ಯವು ಸೇರಿದಂತೆ ಜಗತ್ತಿನ ಅತ್ಯುತ್ತಮ ಕಾವ್ಯ, ತತ್ವಶಾಸ್ತ್ರ, ವಿಜ್ಞಾನ ಇವೆಲ್ಲವುಗಳ ಜೊತೆಗೆ ಒಡನಾಡಿ, ಅವೆಲ್ಲವನ್ನೂ ಅಧಿಕೃತವಾಗಿ, ಆದರೆ ಹಗುರವಾಗಿ, ಆತ್ಮೀಯವಾಗಿ ನೆನಪಿಸಿಕೊಳ್ಳುವ ಪ್ರಜ್ಞೆ ಇದಾಗಿದೆ. ಅವೆಲ್ಲವನ್ನೂ ಸಾಮಾನ್ಯೀಕರಣಗೊಳಿಸಿ ಅನೌಪಚಾರಿಕವಾಗಿ ಬಳಸಿಕೊಳ್ಳುವ ಕಾವ್ಯಪ್ರಜ್ಞೆಯು ಇದಾಗಿದೆ. ಉದಾಹರಣೆಗೆ, ಇಟಾಲಿಯನ್ ಭಾಷೆಯಲ್ಲಿ ಮಧ್ಯಯುಗದಲ್ಲಿ ಬರೆದ ಕವಿ ಡಾಂಟೆಯ ಮಹಾಕಾವ್ಯ 'ಡಿವೈನ್ ಕಾಮೆಡಿ'ಯನ್ನು ಇಲ್ಲಿಯ ಒಂದು ಪದ್ಯ ಬಳಸಿಕೊಳ್ಳುವುದು ಹೀಗೆ. ಆ ಕಾವ್ಯದಲ್ಲಿ ಕಡುಪಾಪಿಗಳು ನರಕದಲ್ಲಿ, ಪಶ್ಚಾತ್ತಾಪಿಗಳು ಶುದ್ಧೀಕರಣ ಲೋಕದಲ್ಲಿ (purgatory) ಮತ್ತು ಕೆಲವೇ ಪವಿತ್ರ ಜೀವಿಗಳು ಸ್ವರ್ಗದಲ್ಲಿ ಇರುತ್ತಾರೆ. ಈ ಕವನದಲ್ಲಿ ಲಂಕೇಶರು ನಿಸ್ಸಂಶಯವಾಗಿ ನರಕದಲ್ಲಿದ್ದಾರೆ. ಅನಂತಮೂರ್ತಿಯವರಿಗೆ ಶುದ್ಧೀಕರಣವು ನಿಗದಿಯಾಗಿದ್ದರೂ, ನಾನು ಲಂಕೇಶ್‌ರಿದ್ದಲ್ಲಿಯೇ ಇರುತ್ತೇನೆ ಎಂದಿದ್ದರಿಂದ ಅವರು ಅಲ್ಲಿಯೇ ಇದ್ದಾರೆ! ಕವಿ ರಾಮಚಂದ್ರ ಶರ್ಮರು ಶುದ್ಧೀಕರಣದಲ್ಲಿ ಇದ್ದರೂ ತಾವು ಪಶ್ಚಾತ್ತಾಪಪಡುವಂಥ ಏನನ್ನೂ ಮಾಡಿಲ್ಲವೆಂದು ವಾದಿಸುತ್ತಿದ್ದಾರೆ. ಅವರು ನಗುತ್ತಾ ಹೇಳುತ್ತಾರೆ:

ನನಗೇನು ಪಶ್ಚಾತ್ತಾಪ ಯಾರಿಗೆ
ಯಾವ ಪಾಪ ಮಾಡಿದ್ದೇನೆಂದು ಪಶ್ಚಾತ್ತಾಪ
ಪಡಬೇಕು.
ಎಂಥಾದ್ದು ನನಗೆ ಶುದ್ಧೀಕರಣ
ಕವಿತೆ ಬರೆದಿದ್ದೇನೆ ನಿಜ
ನನ್ನದೇ ರೀತಿಯಲ್ಲಿ
ಆದರೆ ಯಾರನ್ನೂ ಮೆಚ್ಚಿಸುವುದಕ್ಕಲ್ಲ
ಆಕ್ರಮಿಸುವುದಕ್ಕೂ ಅಲ್ಲ

ಡಾಂಟೆ ತನ್ನ ಕಾಲದ ಅನೇಕರನ್ನು (ಬದುಕಿದವರನ್ನೂ!) ಈ ಮೂರು ಲೋಕಗಳಲ್ಲಿ




ಪುಸ್ತಕದ ಹೆಸರು: ಅಪ್ರಮೇಯ
ಲೇ: ಕೆ.ವಿ. ತಿರುಮಲೇಶ್
ಪು: 264 ಬೆ: 270
ಪ್ರಕಾಶನ: ಅಭಿನವ ಪ್ರಕಾಶನ, ಬೆಂಗಳೂರು,
ಫೋನ್: 9448804905

ಇದ್ದಂತೆ ತನ್ನ ಮಹಾಕಾವ್ಯದಲ್ಲಿ ಬರೆದ ಎನ್ನುವುದನ್ನು ನೆನಪಿಸಿಕೊಳ್ಳಬಹುದಾಗಿದೆ. ಇಷ್ಟೆಲ್ಲ ಹೇಳಿ ತಮ್ಮ ಸಿಗರೇಟಿನ ಹೊಗೆಯಲ್ಲಿ ರಾಮಚಂದ್ರ ಶರ್ಮರು ಮಾಯವಾಗುತ್ತಾರೆ.

ಇಂಥದೇ ಇನ್ನೊಂದು ಪದ್ಯದಲ್ಲಿ ಕ್ರಿಶ್ಚಿಯನ್ ನಂಬಿಕೆಯ ಪ್ರಕಾರ ಸ್ವರ್ಗ ಹಾಗೂ ನರಕದ ಬೀಗದ ಕೈಗಳನ್ನು ಇಟ್ಟುಕೊಂಡಿರುವ ಸೇಂಟ್ ಪೀಟರ್‌ನಿಗೆ ಈಗ ಹಲವು ಸಾವಿರ ವರ್ಷ ವಯಸ್ಸಾಗಿ ಮರೆವು ಬಾಧಿಸುತ್ತಿದೆ. ಹೀಗಾಗಿ ಕೆಲವೊಮ್ಮೆ ಯಾರನ್ನು ಸ್ವರ್ಗಕ್ಕೆ ಯಾರನ್ನು ನರಕಕ್ಕೆ ಕಳಿಸಿದೆ ಎನ್ನುವ ಗೊಂದಲವಿದೆ. ಕೆಲವೊಮ್ಮೆ ಬೀಗಗಳನ್ನು ಎಲ್ಲಿಟ್ಟಿದ್ದೇನೆ ಎಂದು ಮರೆತುಹೋಗಿ ಆತ್ಮಗಳು ಕಾಯುತ್ತಾ